ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸ್ಯ 1890ನೇ ಇಸವಿ ಜೂ್ 18ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತು ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರಗಳ ವಾಸಸ್ಥಳ.	ಜಿಲ್ಲೆಲಗೆ.	ಯಾವಾಗ ದೇಣಿ ಕೊಡಬೇಕು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಮೈಸೂರು ದೊಡ್ಡ ಪ್ಯಾಟೆಯಲ್ಲಿರುವ ರಘುನಾಥಗಿರಿ ಗೋಸಾಯಿ ..	35 0 0	..	ಡಿಕರಿ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ತಾರೀಖು 24ನೇ ಜೂ್ 1890.

ಮೈಸೂರು ಡಿಸ್ಟ್ರಿಕ್ಟ್ಗೆ ಕೀರಿದ ತಾಲ್ಲೂಕುಗಳಿಂದ ಈ ಕೆಳಗೆ ಅದರದರ ಬಾಜೂದಲ್ಲಿ ಕಂಡ ಕೋಠಿಗಳಿಗೆ ಐ್ ಬಣಸಂದಲ್ ಮರಗಳನ್ನು ಬೇರು ಸಹಿತವಾಗಿ ಭೂಮಿಯಿಂದ ಕೀಳಿಸಿ ತಯಾರ್ಮಾಡಿಸಿ ರವಾನೆ ಮಾಡತಕ್ಕ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

2. ತಮ್ಮಾಂ ದರಖಾಸ್ತುಗಳ ಮೇಲೆ "ಬಣ ಸಂದಲ್ ಮರಗಳನ್ನು ಬೇರು ಸಹಿತವಾಗಿ ಭೂಮಿಯಿಂದ ಕೀಳಿಸಿ ತಯಾರ್ಮಾಡಿಸಿ ಕೋಠಿಗೆ ರವಾನಿಸತಕ್ಕ ಬಗ್ಗೆ ದರಖಾಸ್ತು" ಎಂಬದಾಗಿ ವಿಳಾಸ ಬರಿಯಬೇಕು.

3. ಇಂಥಾ ದರಖಾಸ್ತುಗಳು 1890ನೇ ಇಸವಿ ಜುಲೈ ತಾರೀಖು 20ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ಸು ಫಾರೆಸ್ಟುಗಳ ಅಸಿಸ್ಟೆಂಟ್ ಕ್ಯಸರ್ವೇಟರ್ ಸಾಹೆಬರವರಿಂದ ತೆಗದುಕೊಳ್ಳಲ್ಪಡುವವು.

4. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತನ್ನ ದರಖಾಸ್ತು ಮಂಜೂರಾದ ಬಗ್ಗೆ ತಾನು ಬರದುಕೊಡುವ ಮುಚ್ಚಳಿಕೆ ಮೇರೆ ಕ್ರಮವಾಗಿ ನಡದುಕೊಳ್ಳುವ ಬಗ್ಗೆ ಜಾಮೀನು ತರೀಕ್ ತಾಲ್ಲೂಕು 1ಕ್ಕೆ 50ರ ಲಾಗಾಯತು 100 ರೂಪಾಯಿಗಳ ವರಿಗೆ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡತಕ್ಕದ್ದು.

5. ಇಂಥಾ ಸಂದಲ್ ತಯಾರಿಯು ಸಂದಲ್ ಮಣೇಗಾರ್ರುಗಳ ತಿಳುವಳಿಕೆ ಬಗ್ಗೆ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರಿಂದ ಫಾಯಿಷ್ ಆಗಿರುವ ಸಂದಲ್ ಮ್ಯಾನ್ಯೂಲ್ನಲ್ಲಿ ಕಂಡಂತೆ ಇರಬೇಕು.

6. ದರಖಾಸ್ತುದಾರರು ಮೇಲ್ಕಂಡ ಕೆಲಸವನ್ನು ನಡಿಸುವದಕ್ಕಾಗಿ ಬಂದು ಅಥವಾ ಜಾಸ್ತಿ ತಾಲ್ಲೂಕುಗಳನ್ನು ಅಪೇಕ್ಷಿಸಿದಲ್ಲಿ ಈ ಕೆಳಗೆ ಕಂಡಮೇರೆ ಬಂದೊಂದು ತಾಲ್ಲೂಕಿಗಾಗಲಿ ಅಥವಾ ಅದರ ಬಂದು ಭಾಗಕ್ಕಾಗಲಿ ಬೇರೆಬೇರೆ ದರಖಾಸ್ತುಗಳನ್ನು ರವಾನಿಸಬೇಕು.

7. ಪ್ರತಿ ಒಬ್ಬ ದರಖಾಸ್ತುದಾರನು ತನ್ನ ದರಖಾಸ್ತಿನಲ್ಲಿ ಈ ಕೆಳಗೆ ಕಂಡ ತಾಲ್ಲೂಕುಗಳಿಂದಲಾಗಲಿ ಅದರ ಬಂದುಭಾಗದಿಂದಲಾಗಲಿ ಮರಗಳನ್ನು ಬೇರುಸಹಿತ ಕೀಳಿಸಿ ತಯಾರ್ಮಾಡಿಸಿ ಕೋಠಿಗೆ ರವಾನೆ ಮಾಡಲು ಒಪ್ಪಿಕೊಳ್ಳುವ ಕಮ್ಮಿ ದರವನ್ನು ದರಖಾಸ್ತಿನಲ್ಲಿ ನಮೂದಿಸಬೇಕು.

8. ಈ ಮೇರೆ ಕಂಟ್ರಾಕ್ಟುದಾರ್ರಿಂದ ಕೋಠಿಗೆ ಕಳುಹಿಸಲ್ಪಡುವ ಸಂದಲ್ನಲ್ಲಿ ಇಲಾಖಾ ಹುಕುಂ ಮೇರೆ ಶೇಕಡಾ 10 ರ್ಟ್ ಪ್ರಕಾರ ಅರವಾಸೀ ಮತ್ತು ಕಮ್ಮಿ ಭರ್ತಿಗಾಗಿ ವಜಾ ಮಾಡಲ್ಪಡುವದು.

9. ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್ವೇಟರ್ ಸಾಹೆಬರವರು ಕಮ್ಮಿ ದರದ ಅಥವಾ ಮತ್ಯಾವ ದರಖಾಸ್ತುಗಳನ್ನಾಗಲಿ ಅಂಗೀಕರಿಸುವದಕ್ಕೂ ಮತ್ತು ತಿರಸ್ಕರಿಸಿದ್ದಕ್ಕೆ ಯಾವ ಕಾರಣಗಳನ್ನು ಕೊಡುವದಕ್ಕೂ ಬದ್ಧರಾಗಿರುವದಿಲ್ಲ, ಇಂಥಾ ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿದೆ.

10. ಉದ್ದೇಶಿಸುವ ಕಂಟ್ರಾಕ್ಟುದಾರರಿಗೆ ಅಪೇಕ್ಷಿತವಾದ ಇನ್ನೂ ಜಾಸ್ತಿ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕ್ಯಸರ್ವೇಟರ್ ಸಾಹೆಬರವರ ಹೆಡ್ ಕ್ವಾರ್ಟರ್ ಆಫಿಸಿನಲ್ಲಾಗಲಿ ಅಥವಾ ಸರ್ಕ್ಯೂಟ್ ಮೊಕ್ಕಾಂಗಳಲ್ಲಾಗಲಿ ತಿಳಿದುಕೊಳ್ಳಬಹುದು.

11. ದರಖಾಸ್ತುದಾರರು ಇಷ್ಟವಿದ್ದರೆ 1890ನೇ ಇಸವಿ ಜುಲೈ 21ನೇ ತಾರೀಖು ಸೋಮವಾರ ದಿವಸ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕ್ಯಸರ್ವೇಟರವರ ಆಫಿಸಿಗೆ ಬಂದು ಹಾಜರಾಗಬಹುದು, ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರು ಜುಲೈ 25ನೇ ತಾರೀಖಿನ ಒಳಗಾಗಿ ಮುಚ್ಚಳಿಕೆಯನ್ನೂ ಬರದುಕೊಡಬೇಕಲ್ಲದೆ ತೇವಣಿಯನ್ನೂ ಸಹ ಕಟ್ಟಬೇಕು.

	ತಾಲ್ಲೂಕು ಹೆಸರು.	ಕೋಠಿ ಹೆಸರು.	ಗೊತ್ತು ಮಾಡಲ್ಪಟ್ಟ ಮೊತ್ತಾ.		ಕಾಲ.
1.	ಮೈಸೂರು	ಶ್ರೀರಂಗಪಟ್ಟಣದ ಕೋಠಿ	50	ಟ್ಯ	1890ನೇ ಇಸವಿ ಅಕ್ಟೋಬರ್ 15ನೇ ತಾರೀಖಿಗೆ ಮುಂಚೆ
2.	ಶ್ರೀರಂಗಪಟ್ಟಣ	ಡಿಟೋ	25	ಡಿಟೋ	ಡಿಟೋ
3.	ತಿರುಮಕೂಡ್ಲು ನರಸೀಪುರ	ಡಿಟೋ	25	ಡಿಟೋ	ಡಿಟೋ
4.	ಚಾಮರಾಜನಗರ	ಡಿಟೋ	75	ಡಿಟೋ	ಡಿಟೋ
5.	ನಂಜನಗೂಡು	ಡಿಟೋ	50	ಡಿಟೋ	ಡಿಟೋ
6.	ಗುಂಡ್ಲು ಪೇಟೆ	ಡಿಟೋ	75	ಡಿಟೋ	ಡಿಟೋ
7.	ಹೆಗ್ಗಡದೇವನಕೋಟೆ (ಕಪಿಲಾನದಿಗೆ ದಕ್ಷಿಣಭಾಗ)	ಡಿಟೋ	75	ಡಿಟೋ	ಡಿಟೋ
8.	ಅತ್ತಿಕುಪ್ಪೆ	ಡಿಟೋ	50	ಡಿಟೋ	ಡಿಟೋ
9.	ನಾಗಮಂಗಲ	ಡಿಟೋ	25	ಡಿಟೋ	ಡಿಟೋ
10.	ಮಂಡ್ಯೆ	ಡಿಟೋ	25	ಡಿಟೋ	ಡಿಟೋ
11.	ಮಳವಳ್ಳಿ	ಡಿಟೋ	25	ಡಿಟೋ	ಡಿಟೋ
12.	ಹುಣಸೂರು	ಹುಣಸೂರು ಕೋಠಿ	200	ಡಿಟೋ	ಡಿಟೋ
13.	ಯಡತೊರೆ	ಡಿಟೋ	150	ಡಿಟೋ	ಡಿಟೋ
14.	ಹೆಗ್ಗಡದೇವನಕೋಟೆ (ಕಪಿಲಾನದಿಗೆ ಉತ್ತರಭಾಗ)	ಡಿಟೋ	150	ಡಿಟೋ	ಡಿಟೋ

ಬಿ. ರಾಮಸ್ವಾಮಯ್ಯರ್,
ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕ್ಯಾಸರವೇಟರ್.

ಹಾಸನ ಡಿಸ್ಟ್ರಿಕ್ಟು.

1890ನೇ ಇಸವಿ 12ನೇ ಜೂನ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಹೊಳೇನರಸೀಪುರ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯು ಪೌಂದು ದಫಾ ಹರಾಜ್ ಮಾಡಿಸಿದ್ದರಲ್ಲಿ ಯಾರೂ ದರಖಾಸ್ತು ಮಾಡಲಿಲ್ಲವಾಗಿ ಪುನಹ ಹೊಳೇನರಸೀಪುರ ತಾಲ್ಲೂಕು ಕಛ್ಚೇರಿಯಲ್ಲಿ ಸ್ಯ 1890ನೇ ಇಸವಿ ಜುಲೈ 18ನೇ ತಾರೀಖು ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲ್ದಾರ್ರು ಅಥವಾ ತಿರಸ್ತೆದಾರ್ರಾಗಲಿ ಹರಾಜ್ ಮಾಡಿಸುವರು.

3. ಈ ಹರಾಜಿನ ಜಡ ದರಖಾಸ್ತು ಹಾಸನ ಡಿಸ್ಟ್ರಿಕ್ಟು ಜೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡುವ ಪರಿಯಂತ್ರ ಖಾಯಂ ಆದ್ದಾಗಿ ತಿಳಿದು ಕೊಳ್ಳಕೂಡದು.

4. ಈ ಇಜಾರೆಯು ಸ್ಯ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಯಿರತಕ್ಕದ್ದು.

5. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡ 25 ರೂಪಾಯಿ ನಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಜೆಪ್ಯುಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದೊಳಗಾಗಿ ಕ್ರಯದ ಪೂರ್ತು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಪೌಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಪೀಲ್ ಬಾಕಿ ಕ್ರಯದ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಹಾಜರ್ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ಒಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನ ತೆಗದುಕೊಳ್ಳಬೇಕಾದರೆ ಹಿಡುವಳಿದಾರ್ರ ಸಮ್ಮತಿಯನ್ನ ಪಡಿಯಬೇಕು. ಜಮೀನ್ ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತಪ್ರಯೋಜನಕ್ಕಾಗಿ ತೆಗದು ಕೊಳ್ಳಲೂ ಕೂಡದು, ಯಿಜಾರೆದಾರನಿಗೆ ಮಾರಬೇಕೇ ಹೊರತು ಯಿತರ ಜನಗಳಿಗೆ ಮಾರಲೂ ಕೂಡದು.

(b) ಯಿಜಾರೆದಾರನು ಹುಲ್ಲು ಬನ್ನಿ ಯಿಜಾರೆದಾರರ ಚರುವು ಹಕ್ಕಿನಲ್ಲಿ ಪ್ರವೇಶಿಸ ಕೂಡದು.

(c) ಬಂಜರು ಜಮೀನ್‌ಗಳು ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಯಿಜಾರೆದಾರನು ಅಡ್ಡಿ ಹೇಳಕೂಡದು. ಅಂಥಾ ಜಮೀನ್‌ಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಯಿಜಾರೆದಾರನಿಗೆ ವುಳದಿರುತ್ತೆ.

(d) ಯಿಜಾರೆದಾರನು ಕಲ್ಲುಗಳಿಗೋಸ್ಕರ ಜಮೀನ್‌ಗಳನ್ನ ಅಗಿಯಕೂಡದು. ಬಂದು ವೇಳೆ ಹಾಗೆ ಅಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿ ಬಿಟ್ಟು ಸಾಗುವಳಿಗೆ ಜಮೀನ್ ಲಾಯಕ್ ಯಿರುವ ಹಾಂಗೆ ಮಾಡಬೇಕು.

ಸಿ. ಮಾದಯ್ಯ,
ಅಫಿಷಿಯೇಟಿಂಗ್ ಜೆಪ್ಯುಟಿ ಕಮ್ಮಿಷನರ್.